np newz | www.npnewz.com | Contact@npnewz.com | 8951054014, 7483168889

# ಎನ್ ಪಿ ನ್ಯೂಸ್
NP NEWS
ಇದು ಭರವಸೆಯ ಬೆಳಕು

ಬುಧವಾರ 12 ನವೆಂಬರ್ 2025 • ಸಂಪುಟ 01 • ಸಂಚಿಕೆ 01 • ಪುಟ 01 • ಪ್ರಧಾನ ಸಂಪಾದಕರು: ವಾಸುದೇವ ಭಟ್ ನೆಕ್ಕರಪಲ್ಕೆ

## ದೆಹಲಿ ಕಾರ್ ಸ್ಫೋಟ
# ಭೂತಾನ್‌ನಿಂದಲೇ ಪ್ರಧಾನಿ ಮೋದಿಯಿಂದ ಖಡಕ್ ಎಚ್ಚರಿಕೆ



**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯ ಕೆಂಪು ಕೋಟೆ ಮೆಟ್ರೋ ನಿಲ್ದಾಣದ ಸಮೀಪ ನಡೆದ ಭೀಕರ ಕಾರು ಸ್ಫೋಟದ ಘಟನೆಗೆ ಸಂಬಂಧಿಸಿದಂತೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭೂತಾನ್‌ನಿಂದಲೇ ಕಠಿಣ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಈ ಹೇಯ ಕೃತ್ಯವನ್ನು ನಡೆಸಿದ ಮತ್ತು ಇದರ ಹಿಂದೆ ಸಂಚು ರೂಪಿಸಿದ ದುಷ್ಕರ್ಮಿಗಳನ್ನು ಯಾವುದೇ ಕಾರಣಕ್ಕೂ ಸುಮ್ಮನೆ ಬಿಡುವುದಿಲ್ಲ ಎಂದು ಅವರು ಸ್ಪಷ್ಟವಾಗಿ ಎಚ್ಚರಿಕೆ ನೀಡಿದ್ದಾರೆ

ದ್ವಿ-ದಿನಗಳ ಅಧಿಕೃತ ಭೇಟಿಗಾಗಿ ಭೂತಾನ್‌ನ ರಾಜಧಾನಿ ಥಿಂಪು ನಗರದಲ್ಲಿರುವ ಪ್ರಧಾನಿ ಮೋದಿ ಅವರು, ಅಲ್ಲಿಂದಲೇ ವಿಡಿಯೋ ಸಂದೇಶದ ಮೂಲಕ ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿದರು.

**ಪ್ರಧಾನಿ ಭಾಷಣದ ವಿವರಗಳು:**

**"ನಾನು ಇಂದು ಬಹಳ ದುಃಖ ಮತ್ತು ಭಾರವಾದ ಹೃದಯದಿಂದ ನಿಮ್ಮೆಲ್ಲರ ಮುಂದೆ ಬಂದಿದ್ದೇನೆ. ನಿನ್ನೆ ಸಂಜೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆದ ಅನಿರೀಕ್ಷಿತ ದುರಂತವು ಇಡೀ ದೇಶವನ್ನು ಆಘಾತಕ್ಕೆ ದೂಡಿದೆ. ಈ ಘಟನೆಯಲ್ಲಿ ತಮ್ಮವರನ್ನು ಕಳೆದುಕೊಂಡ ಕುಟುಂಬಗಳ ನೋವು ಮತ್ತು ದುಃಖವನ್ನು ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ. ಈ ಕಷ್ಟದ ಸಮಯದಲ್ಲಿ, ಇಡೀ ಭಾರತೀಯ ಸಮುದಾಯವು ಆ ಸಂತ್ರಸ್ತ ಕುಟುಂಬಗಳ ಪರವಾಗಿ ದೃಢವಾಗಿ ನಿಲ್ಲುತ್ತದೆ ಮತ್ತು ಅವರಿಗೆ ಅಗತ್ಯವಿರುವ ಎಲ್ಲಾ ಬೆಂಬಲವನ್ನು ನೀಡುತ್ತದೆ,"** ಎಂದು ಅವರು ಭಾವನಾತ್ಮಕ ಸಾಂತ್ವನ ನೀಡಿದರು.

**ದ್ವಿ-ದಿನಗಳ ಭೇಟಿಗಾಗಿ ಭೂತಾನ್‌ನಲ್ಲಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೆಹಲಿಯ ಕೆಂಪು ಕೋಟೆ ಸಮೀಪ ನಡೆದ ಕಾರು ಸ್ಫೋಟದ ಕುರಿತು ಕಠಿಣ ಪ್ರತಿಕ್ರಿಯೆ ನೀಡಿದ್ದಾರೆ. "ನಾನು ಭಾರವಾದ ಹೃದಯದಿಂದ ಬಂದಿದ್ದೇನೆ," ಎಂದು ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿದ ಪ್ರಧಾನಿ, ಈ ಹೇಯ ಕೃತ್ಯದ ಸೂತ್ರಧಾರರು ಯಾರೇ ಇರಲಿ, ಅವರಿಗೆ ಕಠಿಣ ಶಿಕ್ಷೆ ಖಚಿತ. ರಾಷ್ಟ್ರದ ಭದ್ರತೆಗೆ ಧಕ್ಕೆ ತರುವ ಯಾವುದೇ ಪ್ರಯತ್ನವನ್ನು ಸರ್ಕಾರ ಸಹಿಸುವುದಿಲ್ಲ ಮತ್ತು ದುಷ್ಕರ್ಮಿಗಳು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಎಚ್ಚರಿಸಿದ್ದಾರೆ.**

**ಕಠಿಣ ಕ್ರಮದ ಎಚ್ಚರಿಕೆ**

ಘಟನೆಗೆ ಕಾರಣರಾದವರ ಬಗ್ಗೆ ಪ್ರಧಾನಿ ಮೋದಿ ಖಡಾಖಂಡಿತವಾಗಿ ಮಾತನಾಡಿದರು. **"ಈ ಅಮಾನವೀಯ ಕೃತ್ಯವನ್ನು ಮಾಡಿದ ಸೂತ್ರಧಾರರು ಯಾರೇ ಇರಲಿ, ಅವರಿಗೆ ಕಠಿಣ ಶಿಕ್ಷೆ ಖಚಿತ. ನಮ್ಮ ದೇಶದ ತನಿಖಾ ಸಂಸ್ಥೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಅವರು ಘಟನೆಯ ಮೂಲವನ್ನು, ಅದರ ಹಿಂದಿನ ಆಳವಾದ ಸಂಚುಗಳನ್ನು ಬೇಧಿಸಿ, ಈ ದ್ರೋಹಿಗಳು ಯಾರೆಂದು ಬೇಗನೆ ಪತ್ತೆ ಹಚ್ಚಲಿದ್ದಾರೆ. ರಾಷ್ಟ್ರದ ಭದ್ರತೆ ಮತ್ತು ಸಾರ್ವಭೌಮತೆಗೆ ಧಕ್ಕೆ ತರುವ ಯಾವುದೇ ಪ್ರಯತ್ನವನ್ನು ಸರ್ಕಾರ ಸಹಿಸುವುದಿಲ್ಲ. ದುಷ್ಕರ್ಮಿಗಳು ಕಾನೂನಿನ ಪರಿಧಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ,"** ಎಂದು ಪ್ರಧಾನಿ ಮೋದಿ ಹೇಳಿದರು. ಭೂತಾನ್‌ನಿಂದಲೇ ಅವರು ನೀಡಿರುವ ಈ ಎಚ್ಚರಿಕೆಯು, ರಾಷ್ಟ್ರದ ಭದ್ರತೆಯ

## ರಾಜ್ಯ ಮಟ್ಟದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮಿಂಚಿದ ಜನಿಟ ವೆಲಿಕಾ ಡಿಸೋಜಾ



**ಕಾರ್ಕಳ:** ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ **2ನೇ** ವರ್ಷದ **ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್** ಇಂಜಿನಿಯರಿಂಗ್ ವಿದ್ಯಾರ್ಥಿನಿ **ಜನಿಟ ವೆಲಿಕ ಡಿಸೋಜ** ಕರ್ನಾಟಕ ರೋಲರ್ ಸ್ಕೇಟಿಂಗ್ ಅಸೋಸಿಯೇಶನ್ ಬೆಂಗಳೂರಿನಲ್ಲಿ **ನವೆಂಬರ್ 5ರಿಂದ 8ರವರೆಗೆ** ಆಯೋಜಿಸಿದ್ದ 41ನೇ **ಕರ್ನಾಟಕ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್** ಮತ್ತು ಆಯ್ಕೆ ಪರೀಕ್ಷೆ **(2025-26)**ಯಲ್ಲಿ **ಮೂರು ಚಿನ್ನದ ಪದಕಗಳನ್ನು** ಗೆದ್ದು, ನಿಟ್ಟೆ ಸಂಸ್ಥೆಗೆ ಹಾಗೂ ಉಡುಪಿ ಕರಾವಳಿ ರೋಲರ್ ಸ್ಕೇಟಿಂಗ್ ಕ್ಲಬ್‌ಗೆ ಕೀರ್ತಿ ತಂದಿದ್ದಾರೆ. **18** ವರ್ಷ ಮೇಲ್ಪಟ್ಟವರ ವಿಭಾಗದ **ಸ್ಪೀಡ್ ಕ್ವಾಡ್ ಸ್ಪರ್ಧೆಯಲ್ಲಿ ಜನಿಟ** ಅವರ ಅದ್ಭುತ ಪ್ರದರ್ಶನವು ಅವರಿಗೆ ಉನ್ನತ ಗೌರವಗಳನ್ನು ತಂದುಕೊಟ್ಟಿರುವುದಷ್ಟೇ ಅಲ್ಲದೆ, ಮುಂದಿನ ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಅವಕಾಶವನ್ನೂ ಒದಗಿಸಿದೆ. ಇವರು ಉಡುಪಿಯ **ಆಗ್ನೆಲ್ಲೊ ಡಿಸೋಜ ಹಾಗೂ ಶ್ರೀಮತಿ ಜೆಸಿಂತಾ ರೋಜ್ ಡಿಸೋಜರವರ** ಪುತ್ರಿಯಾಗಿರುತ್ತಾರೆ. **ಮನೀಶ್ ಬಂಗೇರ ಮತ್ತು ಕಿಶೋರ್ ಕುಮಾರ್** ಇವರಿಗೆ ಮಾರ್ಗದರ್ಶನ ನೀಡಿರುತ್ತಾರೆ.







## TECH NEWS
### ಟೊಯೋಟಾದಿಂದ ಕ್ರಾಂತಿಕಾರಿ ಹಿಲಕ್ಸ್ ಪಿಕಪ್
### ಹೊಸ ವೈಶಿಷ್ಟ್ಯಗಳ ಸಮಗ್ರ ನೋಟ



ಟೊಯೋಟಾ ತನ್ನ ಜನಪ್ರಿಯ **'ಹಿಲಕ್ಸ್' ಪಿಕಪ್ ಟ್ರಕ್‌**ನ **ಒಂಬತ್ತನೇ ತಲೆಮಾರಿನ** ಮಾದರಿಯನ್ನು ಪರಿಚಯಿಸಿದೆ. ಈ ಹೊಸ ಆವೃತ್ತಿಯು ಮುಂದಿನ ವರ್ಷದ ಆರಂಭದಲ್ಲಿ ಮಾರಾಟಕ್ಕೆ ಲಭ್ಯವಾಗಲಿದೆ.

ಇದರ ಪ್ರಮುಖ ಆಕರ್ಷಣೆಯೆಂದರೆ, ಇದೇ ಮೊದಲ ಬಾರಿಗೆ ಸಂಪೂರ್ಣ **ಎಲೆಕ್ಟ್ರಿಕ್ ವಾಹನ** (BEV) ಆವೃತ್ತಿಯನ್ನು ಪರಿಚಯಿಸಲಾಗಿದೆ, ಇದರೊಂದಿಗೆ **2028ರ** ವೇಳೆಗೆ **ಫ್ಯೂಯಲ್-ಸೆಲ್ ಎಲೆಕ್ಟ್ರಿಕ್** (FCEV) ಮಾದರಿಯೂ ಬರಲಿದೆ.

ನವೀಕರಿಸಿದ ವಿನ್ಯಾಸವು ದೃಢವಾದ ನೋಟವನ್ನು ನೀಡುತ್ತದೆ ಮತ್ತು ಇದು ಡಬಲ್ ಕ್ಯಾಬ್ ಮಾದರಿಯಲ್ಲಿ ಮಾತ್ರ ಲಭ್ಯ. ಒಳಾಂಗಣವು **12.3**-ಇಂಚಿನ **ಡಿಜಿಟಲ್ ಕ್ಲಸ್ಟರ್ ಮತ್ತು ಟಚ್‌ಸ್ಕ್ರೀನ್** ಹೊಂದಿದೆ. ಸುರಕ್ಷತೆಗಾಗಿ, ಇದು ADAS ವೈಶಿಷ್ಟ್ಯಗಳನ್ನು ಒಳಗೊಂಡಿದೆ.

**ಪವರ್‌ಟ್ರೇನ್:** ಹಿಲಕ್ಸ್ EV ಯು **59.2** kWh ಬ್ಯಾಟರಿಯೊಂದಿಗೆ **240** ಕಿ.ಮೀ ವರೆಗೆ ವ್ಯಾಪ್ತಿ ನೀಡುತ್ತದೆ. **ಇಂಟರ್ನಲ್ ಕಂಬಷನ್ ಎಂಜಿನ್** (ICE) ಮಾದರಿಗಳು **2.7**-ಲೀಟರ್ ಪೆಟ್ರೋಲ್ ಮತ್ತು 2.8-ಲೀಟರ್ ಡೀಸೆಲ್ ಎಂಜಿನ್‌ಗಳನ್ನು ಹೊಂದಿವೆ, ಡೀಸೆಲ್‌ನಲ್ಲಿ **48**ಗಿ ಮೈಲ್ಡ್-ಹೈಬ್ರಿಡ್ ಆಯ್ಕೆಯೂ ಲಭ್ಯ. ಇದು ಎಲೆಕ್ಟ್ರಿಕ್ ಅಸಿಸ್ಟೆಡ್ ಅಥವಾ ಹೈಡ್ರಾಲಿಕ್ ಪವರ್ ಸ್ಟೀರಿಂಗ್‌ನೊಂದಿಗೆ ಬರಲಿದೆ.

## ತಿರುಪತಿ ಲಡ್ಡು ತಯಾರಿಕೆಯಲ್ಲಿ ನಕಲಿ ತುಪ್ಪ: ಪವನ್ ಕಲ್ಯಾಣ್ ಅವರಿಂದ 'ಸನಾತನ ಧರ್ಮ ಪರಿರಕ್ಷಣಾ ಮಂಡಳಿ' ಸ್ಥಾಪನೆಗೆ ಕೋರಿಕೆ

**ತಿರುಮಲ ತಿರುಪತಿ ದೇವಸ್ಥಾನಂ** (TTD) ನ ಜಗತ್ಪ್ರಸಿದ್ಧ ಲಡ್ಡು ಪ್ರಸಾದದ ತಯಾರಿಕೆಯಲ್ಲಿ **ನಕಲಿ ತುಪ್ಪ ಬಳಸಲಾಗಿದೆ** ಎಂಬ ವಿಷಯ ದೇಶಾದ್ಯಂತ ಭಕ್ತರಲ್ಲಿ ತೀವ್ರ ಆಘಾತ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ. ಕೇಂದ್ರೀಯ ತನಿಖಾ ದಳ (CBI) ನಡೆಸಿದ ತನಿಖೆಯಲ್ಲಿ ಈ ಬೆಚ್ಚಿಬೀಳಿಸುವ ಜಾಲ ಬಯಲಾಗಿದೆ.

**ಡಿಸಿಎಂ ಪವನ್ ಕಲ್ಯಾಣ್ ಅವರ ಪ್ರತಿಕ್ರಿಯೆ:**

ಆಂಧ್ರ ಪ್ರದೇಶದ ಉಪ ಮುಖ್ಯಮಂತ್ರಿ (DCM) ಪವನ್ ಕಲ್ಯಾಣ್ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಹಿಂದೂ ಧಾರ್ಮಿಕ ಭಾವನೆಗಳ ರಕ್ಷಣೆಗಾಗಿ ತಕ್ಷಣವೇ 'ಸನಾತನ ಧರ್ಮ ಪರಿರಕ್ಷಣಾ ಮಂಡಳಿ'ಯನ್ನು ಸ್ಥಾಪಿಸಬೇಕು ಎಂದು ತಮ್ಮ ಟ್ವೀಟ್ ಮೂಲಕ ಒತ್ತಾಯಿಸಿದ್ದಾರೆ.

ತಿರುಪತಿ ಲಡ್ಡು ಕೇವಲ ಸಿಹಿ ತಿಂಡಿಯಲ್ಲ, ಅದು ಭಾವನಾತ್ಮಕ ಅನುಬಂಧದ ಪ್ರತೀಕವಾಗಿದ್ದು, ಈ ರೀತಿ ಅಪಹಾಸ್ಯ ಮಾಡುವುದು ಭಕ್ತರ ನಂಬಿಕೆಯ ಮೂಲವನ್ನೇ ಛಿದ್ರಗೊಳಿಸುತ್ತದೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.




**ಸಿಬಿಐ ತನಿಖಾ ವರದಿ:**

ಸಿಬಿಐ ವರದಿಯ ಪ್ರಕಾರ, **ಭೋಲೆಬಾಬಾ ಡೇರಿ** ಎಂಬ ಕಂಪನಿಯು ರೂರ್ಕಿಯಲ್ಲಿರುವ ತನ್ನ ಸ್ಥಾವರದಲ್ಲಿ ತಾಳೆ ಎಣ್ಣೆಯೊಂದಿಗೆ ರಾಸಾಯನಿಕಗಳನ್ನು ಮಿಶ್ರಣ ಮಾಡಿ ನಕಲಿ ತುಪ್ಪವನ್ನು ತಯಾರಿಸುತ್ತಿತ್ತು. ಈ ಕಂಪನಿಯು 2019 ರಿಂದ 2024 ರ ಅವಧಿಯಲ್ಲಿ ಯಾವುದೇ ಹಾಲು ಅಥವಾ ಬೆಣ್ಣೆಯನ್ನು ಪಡೆಯದಿದ್ದರೂ, ಮಧ್ಯವರ್ತಿಗಳ ಮೂಲಕ ಟಿಟಿಡಿಗೆ ಬರೋಬ್ಬರಿ 68 ಲಕ್ಷ ಕೆಜಿ ನಕಲಿ ತುಪ್ಪವನ್ನು ಪೂರೈಕೆ ಮಾಡಿರುವುದು ದೃಢಪಟ್ಟಿದೆ. ಈ ಜಾಲದ ಮುಖ್ಯ ಆರೋಪಿ ಅಜಯ್ ಕುಮಾರ್ ಸುಗಂಧನನ್ನು ಬಂಧಿಸಲಾಗಿದೆ.ಈ ದುರ್ಬಳಕೆಯನ್ನು ತಡೆಯಲು, ಪ್ರತಿಕ್ರಿಯಿಸಿದ ಹಲವು ಭಕ್ತರು, ಟಿಟಿಡಿಯು ಲಡ್ಡು ತಯಾರಿಕೆಗಾಗಿ ಶುದ್ಧ ತುಪ್ಪವನ್ನು ಪಡೆಯಲು ತನ್ನದೇ ಆದ ಬೃಹತ್ ಗೋಶಾಲೆಯನ್ನು ನಿರ್ಮಿಸಬೇಕು ಎಂದು ಮಹತ್ವದ ಸಲಹೆ ನೀಡಿದ್ದಾರೆ.

**ಭಕ್ತರ ಹೊಸ ಸಲಹೆ:**

**ಈ ದುರ್ಬಳಕೆಯನ್ನು ತಡೆಯಲು, ಉಪಮುಖ್ಯಮಂತ್ರಿಗಳ ಟ್ವೀಟ್‌ಗೆ ಪ್ರತಿಕ್ರಿಯಿಸಿದ ಹಲವು ಭಕ್ತರು, ಟಿಟಿಡಿಯು ಲಡ್ಡು ತಯಾರಿಕೆಗಾಗಿ ಶುದ್ಧ ತುಪ್ಪವನ್ನು ಪಡೆಯಲು ತನ್ನದೇ ಆದ ಬೃಹತ್ ಗೋಶಾಲೆಯನ್ನು ನಿರ್ಮಿಸಬೇಕು ಎಂದು ಮಹತ್ವದ ಸಲಹೆ ನೀಡಿದ್ದಾರೆ.**

## ಕಾರ್ಕಳದ ತೆಳ್ಳಾರು ಮಸೀದಿ ಬಳಿಯ ಮನೆಯಲ್ಲಿ ಜಿಂಕೆ ಮಾಂಸ ಪತ್ತೆ





**ಕಾರ್ಕಳ:** ಕಾರ್ಕಳ ತಾಲೂಕಿನ ದುರ್ಗಾ ಗ್ರಾಮದ **ತೆಳ್ಳಾರು ಮಸೀದಿ** ಬಳಿಯ ಮನೆಯೊಂದರಲ್ಲಿ **ನವೆಂಬರ್ 12** ರಂದು **ಜಿಂಕೆ ಮಾಂಸ** ಪತ್ತೆಯಾದ ಘಟನೆ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಕಳ ಗ್ರಾಮಾಂತರ ಠಾಣೆ ಪೊಲೀಸರು **ಶುಕೂರ್** ಎಂಬಾತನನ್ನು ವಶಕ್ಕೆ ಪಡೆದಿದ್ದಾರೆ. ಪೊಲೀಸರು **ಶುಕೂರ್**‌ನ ಮನೆಯಲ್ಲಿ ತಪಾಸಣೆ ನಡೆಸಿದಾಗ **ಜಿಂಕೆ ಮಾಂಸ ಮತ್ತು ಚರ್ಮ** ಪತ್ತೆಯಾಗಿದೆ. ಆತನನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ.

**ಶುಕೂರ್** ಮತ್ತವರ ಮಕ್ಕಳಾದ **ಸಾದತ್ ಮತ್ತು ಸಫತ್** ವೃತ್ತಿಪರ **ದನಕಳ್ಳರಾಗಿದ್ದು, ಸಾದತ್ ಹಾಗೂ ಸಫತ್** ವಿರುದ್ಧ ಈಗಾಗಲೇ ಹಲವಾರು ದನಕಳ್ಳತನ ಪ್ರಕರಣಗಳು ದಾಖಲಾಗಿವೆ ಎಂದು ತಿಳಿದು ಬಂದಿದೆ. ಈ ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ ಘಟನಾ ಸ್ಥಳದಲ್ಲಿ ಹಿಂದೂ ಪರ ಸಂಘಟನೆಯ ಕಾರ್ಯಕರ್ತರು ಜಮಾಯಿಸಿದ್ದಾರೆ.

## ಸಾವಿನ ಸುತ್ತ ಅನುಮಾನದ ಹುತ್ತ ???

**ಪೆರ್ಡೂರಿನಿಂದ ನಾಪತ್ತೆಯಾಗಿದ್ದ 15 ವರ್ಷದ ಬಾಲಕ ಶವವಾಗಿ ಪತ್ತೆ.**



**ಪೆರ್ಡೂರು:**ಪೆರ್ಡೂರು ಪ್ರದೇಶದಿಂದ ಕಾಣೆಯಾಗಿದ್ದ **10** ನೇ ತರಗತಿ ವಿದ್ಯಾರ್ಥಿಯೊಬ್ಬ ಶವವಾಗಿ ಪತ್ತೆಯಾಗಿರುವ ದುರಂತ ಘಟನೆ ನಡೆದಿದೆ. **ಶ್ರೀಶನ್ ಶೆಟ್ಟಿ (15 ವರ್ಷ)** ಮೃತ ವಿದ್ಯಾರ್ಥಿಯಾಗಿದ್ದು, ಈತ ಹಿರಿಯಡ್ಕದ ಕರ್ನಾಟಕ ಪಬ್ಲಿಕ್ ಸ್ಕೂಲ್ನಲ್ಲಿ **10** ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ. ನಿನ್ನೆ ತನ್ನ ವಾಹನ ಸಹಿತ ನಾಪತ್ತೆಯಾಗಿದ್ದ ಈ ಬಾಲಕ ಇಂದು **ಪೆರ್ಡೂರಿನ ಕುಕ್ಕುಂಡಿ** ಹೊಳೆಬಾಗಿಲಿನಲ್ಲಿ ಶವವಾಗಿ ಪತ್ತೆಯಾಗಿದ್ದಾನೆ. ಸದ್ಯಕ್ಕೆ ಈ ಸಾವಿಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಈ ಕುರಿತು **ಹಿರಿಯಡ್ಕ** ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆಯನ್ನು ಮುಂದುವರಿಸಿದ್ದಾರೆ.

## HEALTH TIPS



ಆಯುರ್ವೇದದಲ್ಲಿ **'ಮಾಷ'** ಎನಿಸಿರುವ **ಉದ್ದು** (UradDal), ಪ್ರೋಟೀನ್, ಫ್ಯಾಟ್, ಕಾರ್ಬೋಹೈಡ್ರೇಟ್‌ನಿಂದ ಸಮೃದ್ಧವಾಗಿದೆ ಮತ್ತು ಸಸ್ಯಾಹಾರಿಗಳಿಗೆ ಮಾಂಸಕ್ಕೆ ಸಮಾನವಾದ ಶಕ್ತಿ ನೀಡುತ್ತದೆ. ಉದ್ದು ಮತ್ತು ಅಕ್ಕಿಯ **1:2** ಅನುಪಾತದ ಇಡ್ಲಿಯು ಅಗತ್ಯ ಪೋಷಕಾಂಶ ಒದಗಿಸುತ್ತದೆ. ಜೀರಿಗೆ, ಕಾಳು ಮೆಣಸು ಸೇರಿಸಿ ಸೇವಿಸುವುದು ಉತ್ತಮ. ಉದ್ದಿಗೆ ನೋವು ನಿವಾರಕ ಶಕ್ತಿಯಿದೆ; ಲೇಪನದಿಂದ ದೇಹದ ನೋವು ಮತ್ತು ಬಾವುಗಳನ್ನು ನಿವಾರಿಸಬಹುದು. ಇದು ನರ ದೌರ್ಬಲ್ಯ **(ಫೇಶಿಯಲ್ ಪಾಲ್ಸಿ, ಪಾರ್ಶ್ವವಾಯು)** ಕಡಿಮೆ ಮಾಡಲು ಸಹಾಯಕವಾಗಿದೆ. ಈ ಸಮಸ್ಯೆ ಇರುವವರು ಬೆಣ್ಣೆಯೊಂದಿಗೆ ಉದ್ದಿನ ಇಡ್ಲಿ ಸೇವಿಸುವುದು ಪರಿಣಾಮಕಾರಿ.

ನೇರಪ್ರಸಾರ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ 7483168889 89510 54014